ಭಾರವಾದ ಶಾಲಾ ಪುಸ್ತಕಗಳನ್ನು ಕಡಿಮೆಗೊಳಿಸುವುದು

87(766) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ): ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಅದರಲ್ಲೂ ಹೆಚ್ಚಾಗಿ ಬೆಂಗಳೂರು ನಗರದಲ್ಲಿ ಶಾಲಾ ಮಕ್ಕಳು ಪ್ರತಿದಿನ ಹತ್ತಾರು ಕೆ.ಜಿ. ತೂಕದ ಸ್ಕೂಲ್ ಬ್ಯಾಗನ್ನು ಬೆನ್ನು ಮೇಲೆ ಹೊತ್ತುಕೊಂಡು ತಿರುಗಾಡುವುದರಿಂದ ಮಕ್ಕಳು ಸ್ನಾಯು ಹಾಗೂ ಕೀಲು ನೋವುಗಳಿಂದ ನರಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಈ ರೀತಿ ಶಾಲಾ ಮಕ್ಕಳು ಹೆಚ್ಚು ಭಾರದ ಪುಸ್ತಕ ಚೀಲ ಹೊರುವುದನ್ನು ಮುಂದಿನ ಶೈಕ್ಷಣಿಕ ವರ್ಷದಿಂದ ತಪ್ಪಿಸಲು ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಶಿಕ್ಷಣ ಸಚಿವರು):

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು: ಮಾನ್ಯ ಅಧ್ಯಕ್ಷರೇ, ನನ್ನ (ಅ) ಮತ್ತು (ಆ) ಪ್ರಶ್ನೆಗೆ "ಇಲ್ಲ", "ಉದ್ಭವಿಸುವುದಿಲ್ಲ" ಎಂದು ಉತ್ತರ ಕೊಟ್ಟಿದ್ದಾರೆ. ಈಗಾಗಲೇ ಅನೇಕ ತಜ್ಞ ವೈದ್ಯರುಗಳು ಮತ್ತು ವೈಜ್ಞಾನಿಕ ಅಕಾಡೆಮಿಗಳು ವರದಿಗಳನ್ನು ಕೊಟ್ಟಿದ್ದು, ಅದರಲ್ಲಿ, ಮಕ್ಕಳು ಪ್ರತಿದಿನ 20 ಕೆ.ಜಿ. ಪುಸ್ತಕಗಳ ಚೀಲವನ್ನು ಹೊತ್ತುಕೊಂಡು ಹೋಗುತ್ತಾರೆ. ಒಂದು ವರ್ಷಕ್ಕೆ ಕನಿಷ್ಟವೆಂದರೆ 6 ಸಾವಿರ ಕೆ.ಜಿ. ಯಷ್ಟು ಭಾರವನ್ನು ಹೊತ್ತುಕೊಂಡು ಹೋಗುವುದರಿಂದ ಭುಜದ ನೋವು, ಕೀಲು ನೋವು, ನರಗಳ ನೋವು, ಸ್ನಾಯು ಎಳೆತ ಎಲ್ಲವೂ ಬರುತ್ತವೆ ಎಂದು ಹೇಳಿದ್ದಾರೆ. ಮಂತ್ರಿಗಳಿಗೆ ಇವೆಲ್ಲಾ ಗೊತ್ತಿವೆ. ಆದರೂ ಕೂಡ, ನಾವು ಪ್ರಶ್ನೆ ಕೇಳಿದಾಗ, ಇಲ್ಲ, ಉದ್ಭವಿಸುವುದಿಲ್ಲ ಎಂದು ಉತ್ತರ ಕೊಟ್ಟಿದ್ದಾರೆ. ಇದರ ಬಗ್ಗೆ ಸರ್ಕಾರ ಇದುವರೆಗೆ ಏಕೆ ಕ್ರಮ ತೆಗೆದುಕೊಂಡಿಲ್ಲ? ಮುಂದೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂದು ಕೇಳುತ್ತಿದ್ದೇನೆ.

ಶ್ರೀ ಎಸ್. ಸುರೇಶ್ ಕುಮಾರ್: ಸನ್ಮಾನ್ಯ ಸಭಾಧ್ಯಕ್ಷರೇ, ಇದೊಂದು ಬಹಳ ಪ್ರಮುಖವಾದಂಥ ಪ್ರಶ್ನೆ, ಬಹಳ ಪ್ರಮುಖವಾದಂಥ ಉತ್ತರ. ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದರೆ "ಇಲ್ಲ" ಎಂದು ಹೇಳಿದ್ದಾರೆ, ಕೈಗೊಳ್ಳಲಿರುವ ಕ್ರಮಗಳೇನು ಎಂದರೆ "ಉದ್ಭವಿಸುವುದಿಲ್ಲ" ಎಂದು ಹೇಳಿದ್ದಾರೆ. ಯಾಂತ್ರಿಕವಾದ, ತಾಂತ್ರಿಕವಾದ ಸರ್ಕಾರೀ ಉತ್ತರವಿದು. ಈ ಉತ್ತರವನ್ನು ನೋಡಿದರೆ, ಸರ್ಕಾರಕ್ಕೆ ಕಣ್ಣಿಲ್ಲ, ಕಿವಿ ಇಲ್ಲ, ಮನಸ್ಸೂ ಕೂಡ ಇಲ್ಲ ಎಂದು ಗೊತ್ತಾಗುತ್ತದೆ. ನಾವು ನಮ್ಮ ಶಾಲೆಗಳಲ್ಲಿ ಭಾವೀ ಕೂಲಿಗಳನ್ನು ನಿರ್ಮಾಣ ಮಾಡುತ್ತಿದ್ದೇವೆ. ಸರ್ಕಾರೀ ಶಾಲೆಗಳಲ್ಲಿ ಓದುವ ಮಕ್ಕಳಿಗೆ ಪುಸ್ತಕಗಳನ್ನು ಕೊಂಡುಕೊಳ್ಳುವ ಸಾಮರ್ಥ್ಯವಿಲ್ಲ, ಖಾಸಗೀ ಶಾಲೆಗಳ ಮಕ್ಕಳಿಗೆ ಪುಸ್ತಕ ಹೊರುವ ಶಾರೀರಿಕ ಸಾಮರ್ಥ್ಯವಿಲ್ಲ.

ಇದೊಂದು ರೀತಿಯ ವಿಪರ್ಯಾಸ. ನಾಯ್ಡುರವರು ಹೇಳಿದ್ದು ಸರಿ. ಆರ್.ಕೆ. ನಾರಾಯಣ್‌ರವರು ರಾಜ್ಯಸಭಾ ಸದಸ್ಯರಾಗಿದ್ದಾಗ ಪ್ರಮುಖವಾದಂಥ ಇದೇ ವಿಚಾರವನ್ನು ಎತ್ತಿದ್ದರು. ಶಾಲಾ ಮಕ್ಕಳನ್ನು ಭಾವೀ ಕೂಲಿಗಳನ್ನಾಗಿ ಮಾಡುತ್ತಿದ್ದೇವೆ ಎಂದು ಹೇಳಿದ್ದರು. ಒಂದು ಸರ್ವೆ ಪ್ರಕಾರ, ಒಂದು ವರ್ಷಕ್ಕೆ 6 ಸಾವಿರ ಕೆ.ಜಿ. ತೂಕವನ್ನು ಒಂದು ಮಗು ಪ್ರಾಥಮಿಕ ಶಾಲಾ ಹಂತದಲ್ಲಿ ಹೊರುತ್ತದೆ ಎಂದರೆ ಒಂದು ಭಾರೀ ಟ್ರಕ್ಕಿಗಿಂತ, ಲೋಡೆಡ್ ಟ್ರಕ್ಕಿಗಿಂತ ಜಾಸ್ತಿ ತೂಕವನ್ನು ಆ ಮಗು ಹೊರುತ್ತಿದೆ. ಇದು ಖಾಸಗೀ ಶಾಲೆಗಳ ವಿಷಯ, ಅದಕ್ಕೂ, ನಮಗೂ ಸಂಬಂಧವಿಲ್ಲ ಎಂದು ನೀವು ಹೇಳಬಹುದು. ಅಧ್ಯಕ್ಷರ ಮುಖಾಂತರ ನಾನು ಸರ್ಕಾರವನ್ನು ಕೇಳಿಕೊಳ್ಳುವುದು ಏನೆಂದರೆ, ಇದರ ಬಗ್ಗೆ ಯಾವುದೇ ರೀತಿಯಿಂದಾದರೂ ಖಾಸಗೀ ಶಾಲೆಗಳ ಮೇಲೆ ನಿಯಂತ್ರಣವಿರಬೇಕು. ಒಂದು ಸಬ್ಜೆಕ್ಟಿಗೆ ಸಂಬಂಧಿಸಿದಂತೆ, ಒಂದು ಸಬ್ಜೆಕ್ಟ್ ಟೆಕ್ಸ್ಟ್‌ಬುಕ್, ಸಬ್ಜೆಕ್ಟ್ ನೋಟ್‌ಬುಕ್, ಸಬ್ಜೆಕ್ಟ್ ನೀಟ್‌ಬುಕ್, ಸಬ್ಜೆಕ್ಟ್ ಹೋಂವರ್ಕ್ ಹೀಗೆ ಪ್ರತಿಯೊಂದು ಸಬ್ಜೆಕ್ಟಿಗೂ ನಾಲ್ಕು ಪುಸ್ತಕಗಳಿರುತ್ತವೆ. ಒಂದು ವೇಳೆ ಟೈಂ ಟೇಬಲ್‌ನಲ್ಲಿ ಇರುವಂಥ ವಿಷಯದ ಉಪಾಧ್ಯಾಯರು ಬರದೇ ಬೇರೆಯವರು ಬಂದರೆ ಅದಕ್ಕೂ ನಾಲ್ಕು ಪುಸ್ತಕಗಳು. ಈ ರೀತಿಯ ಪರಿಸ್ಥಿತಿ ಇರುವುದರಿಂದ ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸಿ, ಮಕ್ಕಳು ಭಾವೀ ಕೂಲಿಗಳಾಗುವುದನ್ನು ನಿಲ್ಲಿಸಲು, ಎಳೆಯ ಕಂದಮ್ಮಗಳ ಮೇಲಿರುವ ಭಾರ ತಡೆಯಲು ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ?

ಶ್ರೀ ಎ. ರಾಮದಾಸ್: ಮಾನ್ಯ ಅಧ್ಯಕ್ಷರೇ, ಇದೇ ಸದನದಲ್ಲಿ ಇದೇ ಪ್ರಶ್ನೆಗೆ ಮಾನ್ಯ ಮಂತ್ರಿಗಳು ಬಹಳ ಚಿಂತನೆಯನ್ನು ಮಾಡಿ ಕಳೆದ ಬಾರಿ ಉತ್ತರವನ್ನು ಕೊಟ್ಟಿದ್ದಾರೆ. ಇದು ನನ್ನ ಗಮನಕ್ಕೂ ಬಂದಿದೆ, ಪುಸ್ತಕಗಳ ಹೊರೆಯನ್ನು ಹೊತ್ತುಕೊಂಡು ಹೋಗುವಂದಾರ್ದನ್ನು ನಾನು ಕಂಡಿದ್ದೇನೆ, ಒಂದು ವರ್ಷದೊಳಗಾಗಿ ಇದಕ್ಕೆ ಒಂದು ಅಂತಿಮ ಹಾಡುತ್ತೇನೆ, ಸಿಲಬಸ್‌ಗೆ ತನ್ನದೇ ಆದಂಥ ರೂಪವನ್ನು ಕೊಡುತ್ತೇನೆ ಎಂದು ಇದೇ ಸದನದಲ್ಲಿ ಹೇಳಿದ್ದರು. ಅವರು ಹೇಳಿದ ಉತ್ತರವೂ ಇಲ್ಲಿ ಇದೆ. ಹೀಗಿರುವಾಗ, ಅಲ್ಲಿರುವಂಥ ಅವೈಜ್ಞಾನಿಕವಾದಂಥ ಎಲ್ಲವನ್ನೂ ಅರಿತಂತ ತಾವು ಒಂದು ವರ್ಷದಲ್ಲೇ, ಇಲ್ಲ, ಉದ್ದವಿಸುವುದಿಲ್ಲ ಎಂದು ಉತ್ತರ ಕೊಟ್ಟರುವಂಥಾದ್ದು ಬಹಳ ನೋವಿನ ಸಂಗತಿ. ಒಂದೇ ವರ್ಷದಲ್ಲಿ ಇದು ಹೇಗೆ ಪರಿವರ್ತನೆಯಾಯಿತು? ಪುಸ್ತಕದ ಹೊರೆಯನ್ನು ಇಳಿಸುತ್ತೇವೆ, ಮಕ್ಕಳ ಮೇಲಿರುವ ಭಾರವನ್ನು ಇಳಿಸುತ್ತೇವೆ ಎಂದು ಹಿಂದೆ ತಾವು ಹೇಳಿದಂಥಾದ್ದಕ್ಕೆ ಏನು ಕ್ರಮ ಕೈಗೊಳ್ಳುತ್ತೀರಿ ಎನ್ನುವುದನ್ನು ದಯವಿಟ್ಟು ಹೇಳಬೇಕು.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ: ಬಹುಶಃ ಮಾನ್ಯ ವಿಶ್ವನಾಥ್‌ರವರು ಮಕ್ಕಳು ಶಾಲೆಗೆ ಹೋಗುತ್ತಿರುವುದನ್ನು ಅನುಭವಿಸುತ್ತಿಲ್ಲವೆಂದು ಕಾಣುತ್ತದೆ. ಅವರ ಮನೆಯಲ್ಲಿ ಮಕ್ಕಳು, ಮೊಮ್ಮಕ್ಕಳು ಇದ್ದಾರೋ, ಇಲ್ಲವೋ ಗೊತ್ತಿಲ್ಲ. ಶಾಲೆಗಳಲ್ಲಿ ತೆಗೆದುಕೊಳ್ಳುವ ಡೊನೇಷನ್‌ನ್ನಂತೂ ತಾವು ನಿಲ್ಲಿಸಲು ಆಗಲಿಲ್ಲ. ಕನಿಷ್ಟ ಈ ಪುಸ್ತಕದ ಹೊರೆಯನ್ನಾದರೂ ಕಡಿಮೆ ಮಾಡಿಕೊಡಿ. ಈಗ ಎಲ್ಲಾ ಕಡೆ ಕಂಪ್ಯೂಟರೈಸೇಷನ್ ಆಗಿರುವುದರಿಂದ, ಆ ಕ್ರಮವನ್ನು ಇಲ್ಲಿಯೂ ಮಾಡಿ ಆದಷ್ಟು ಬೇಗ, ಈ ಹೊರೆಯನ್ನು ಆದಷ್ಟು ಕಡಿಮೆ ಮಾಡಿ ಎಂದು ಹೇಳುತ್ತೇನೆ.

11.10 ಎ.ಎಂ

ಶ್ರೀ ಸಿ. ಚೆನ್ನಿಗಪ್ಪ: ಮಾನ್ಯ ಅಧ್ಯಕ್ಷರೆ, ಇವತ್ತು ಖಾಸಗಿ ಶಾಲೆಗಳಲ್ಲಿ ಮೆಥಡ್ ಆಫ್ ಟೀಚಿಂಗ್ ಅಥವಾ ವೇ ಆಫ್ ಟೀಚಿಂಗ್‌ನ್ನು ಇಂಟ್ರಡ್ಯೂಸ್ ಮಾಡುವಂಥ ವ್ಯವಸ್ಥೆ ಇಲ್ಲ. ಕಾರಣವೇನೆಂದರೆ ಅಂಥ ಶಾಲೆಗಳಿಗೆ ಡೊನೇಷನ್ ಕಟ್ಟುವವರು ಬೇಕು. ಪಠ್ಯಪುಸ್ತಕ ಎಷ್ಟು ತೆಗೆದುಕೊಂಡು ಹೋಗಬೇಕು, ನೋಟ್ ಬುಕ್ ಎಷ್ಟು ತೆಗೆದುಕೊಂಡು ಹೋಗಬೇಕು ಇತ್ಯಾದಿ ಬಗ್ಗೆ ತಜ್ಞರ ಸಮಿತಿಯನ್ನು ಮಾಡಿ ಅವರ ಸಲಹೆಯಂತೆ ಮುಂದಿನ ಸಾಲಿನಲ್ಲಾದರೂ ಮಾಡಬೇಕೆಂದು ಕೋರುತ್ತೇನೆ.

ಶ್ರೀ ಬಿ.ಬಿ. ಶಿವಪ್ಪ: ಮಾನ್ಯ ಅಧ್ಯಕ್ಷರೆ, ಪುಸ್ತಕಗಳ ಭಾರ ಮಕ್ಕಳ ಹೆಗಲ ಮೇಲೆ ಇಲ್ಲ ಎಂದು ಸರ್ಕಾರ ಉತ್ತರ ಕೊಟ್ಟಿರುವುದರಿಂದ, ಪ್ರತಿ ದಿವಸ ಬೆಳಿಗ್ಗೆ ಮಕ್ಕಳು ಶಾಲೆಗೆ ಹೋಗುವಂಥ ರಸ್ತೆಯಲ್ಲಿ ನಿಂತುಕೊಂಡು ಒಬ್ಬೊಬ್ಬರು ಎಷ್ಟು ಕೆ.ಜಿ. ಭಾರದ ಚೀಲಗಳನ್ನು ಹೊತ್ತುಕೊಂಡು ಹೋಗುತ್ತಾರೆನ್ನುವುದನ್ನು ನೋಡಲಿ. ಎಲ್.ಕೆ.ಜಿ. ಯಿಂದ ಒಂದು ಮಗು ಒಂದು ಕೆ.ಜಿ. ಭಾರ ಹೊರಲಿಕ್ಕೆ ಪ್ರಾರಂಭ ಮಾಡಿ ಅವನು ಗ್ರಾಜ್ಯುಯೇಟ್ ಆಗಿ ಮುಂದೆ ಹೋಗಬೇಕಾದರೆ 50 ಕೆ.ಜಿ. ಭಾರ ಹೊರುವಷ್ಟು ಶಕ್ತಿ ಬಂದು ಮಾರುಕಟ್ಟೆಗೆ ಹೋಗಬಹುದು ಎನ್ನುವ ಉದ್ದೇಶದಿಂದ ಬಹುಶಃ ಈ ವ್ಯವಸ್ಥೆ ಇರಬಹುದೆಂದು ನನಗನ್ನಿಸುತ್ತದೆ. ಮಕ್ಕಳು ಶಾಲೆಗಳಿಗೆ ಹೋಗುವಾಗ ಪುಸ್ತಕಗಳ ಭಾರವನ್ನು ಹೊತ್ತುಕೊಂಡು ಹೋಗುತ್ತಾರೆನ್ನುವುದು ಮಾನ್ಯ ಮಂತ್ರಿಗಳಿಗೆ ಗೊತ್ತಿದೆ. ಅದನ್ನು ಯಾವುದಾದರೂ ರೀತಿಯಲ್ಲಿ ಕಡಿಮೆ ಮಾಡುತ್ತೇವೆ ಎನ್ನುವಂಥ ಮಾತನ್ನು ಮಾನ್ಯ ಮಂತ್ರಿಗಳು ಹೇಳಿದ್ದರೆ ಸಂತೋಷವಾಗುತ್ತಿತ್ತು. ಇಲ್ಲವೇ ಇಲ್ಲ ಎಂದು ಹೇಳಿದರೆ ಹೇಗೆ?

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್: ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ತಮ್ಮ ಮಕ್ಕಳನ್ನು ಕನ್ನಡ ಶಾಲೆಗೆ ಕಳುಹಿಸುತ್ತಿರುವುದರಿಂದ ಅವರಿಗೆ ಪುಸ್ತಕ ಹೊರುವವರ ಸಂಕಟ ಏನೆಂಬುದು ಗೊತ್ತಾಗುತ್ತಿಲ್ಲ.

ಶ್ರೀ ಎಂ. ಚಂದ್ರಪ್ಪ: ಮಾನ್ಯ ಅಧ್ಯಕ್ಷರೆ, ಚಿಕ್ಕವಯಸ್ಸಿನಲ್ಲಿಯೇ ಜವಾಬ್ದಾರಿ ಹೊರಬೇಕು ಎನ್ನುವಂಥ ನೀತಿ ಏನಾದರೂ ಸರ್ಕಾರದಲ್ಲಿ ಇದೆಯೇ?

ಶ್ರೀ ಹೆಚ್. ವಿಶ್ವನಾಥ್: ಮಾನ್ಯ ಅಧ್ಯಕ್ಷರೆ, ಬಹಳಷ್ಟು ಜನ ಸದಸ್ಯರು ಈ ಬಗ್ಗೆ ಆತಂಕ ವ್ಯಕ್ತಪಡಿಸಿದ್ದಾರೆ. ಹಿಂದೆ ಕೂಡ ಸರ್ಕಾರ 'ಯಶ್‌ಪಾಲ್ ಕಮಿಟಿ' ಎಂದು ಮಾಡಿ ಈ ಮಕ್ಕಳು ಹೊರೆ ಹೊರುವುದನ್ನು ಹೇಗೆ ತಪ್ಪಿಸಬಹುದು ಎನ್ನತಕ್ಕಂಥ ಒಂದು ಗೈಡ್‌ಲೈನ್ಸ್‌ನ್ನು ಕೂಡ ಕೊಟ್ಟಿದ್ದಾರೆ. ನಾವು ಏನೇ ಗೈಡ್‌ಲೈನ್ಸ್ ಕೊಟ್ಟರೂ ಕೂಡ ಅದನ್ನು ಆನುಷ್ಠಾನಕ್ಕೆ ತರುವಂಥದ್ದು ಪೋಷಕರ ಕರ್ತವ್ಯವಾಗಿದೆ. ಪುಸ್ತಕಗಳ ಹೊರೆ ಹೊರಿಸುವಂಥ ಶಾಲೆಗಳು ಬಹಳ ಕಡಿಮೆ. ಬೆಂಗಳೂರು ಸಿಟಿ ಮತ್ತು ಮೈಸೂರು ಸಿಟಿಗಳಲ್ಲಿರುವ ಕೆಲವು ಶಾಲೆಗಳು ಮಾತ್ರ ಇರಬಹುದು.

ಶ್ರೀ ಕೆ.ಎಂ. ಕೃಷ್ಣಮೂರ್ತಿ: ಮಾನ್ಯ ಅಧ್ಯಕ್ಷರೆ, ಇಂಥ ಶಾಲೆಗಳು ಬೆಂಗಳೂರಿನಲ್ಲಿ ಮಾತ್ರ ಅಲ್ಲ, ಸಾಮಾನ್ಯವಾಗಿ ಎಲ್ಲಾ ಜಿಲ್ಲೆಗಳ ಹೆಡ್‌ಕ್ವಾರ್ಟರ್‌ಗಳಲ್ಲಿ ಕೂಡ ಮಕ್ಕಳು ಹೆಚ್ಚು ಪುಸ್ತಕಗಳ ಭಾರವನ್ನು ಹೊರುವಂಥ ಪರಿಸ್ಥಿತಿ ಇದೆ.

ಶ್ರೀ ಹೆಚ್.ವಿಶ್ವನಾಥ್: ಮಾನ್ಯ ಅಧ್ಯಕ್ಷರೆ, ಮಕ್ಕಳಿಗೆ ತೊಂದರೆ ಆಗದ ಹಾಗೆ ನಾವು ಯಾವುದೇ ಕಾರ್ಯಕ್ರಮವನ್ನು ಹಾಕಿಕೊಂಡರೂ ಕೂಡ ಅದಕ್ಕೆ ಪೋಷಕರು ಹೆಚ್ಚು ಮುತುವರ್ಜಿ ವಹಿಸಬೇಕಾಗುತ್ತದೆ. ಪಾಠ ಇರಲಿ ಬಿಡಲಿ, ಮಕ್ಕಳು ಎಲ್ಲಾ ಪುಸ್ತಕಗಳನ್ನು ಹೊತ್ತುಕೊಂಡು ಹೋಗುತ್ತಾರೆ. ಅದರ ಜೊತೆಯಲ್ಲಿ ಅನ್ನದ ಡಬ್ಬ, ನೀರಿನ ಬಾಟ್ಲು ಎಲ್ಲಾ ಸೇರಿ ಒಂದು ದೊಡ್ಡ ಹೊರೆಯನ್ನು ಮಕ್ಕಳು ಹೊತ್ತುಕೊಂಡು ಹೋಗುತ್ತಾರೆ. ನಮ್ಮ ಅಧಿಕಾರಿಗಳಿಗೆ ಕೂಡ ಸರ್ಕಾರದಿಂದ ಸುತ್ತೋಲೆ ಕಳುಹಿಸಿ ಕೆಲವು ಶಾಲೆಗಳಿಗೆ ನೋಟೀಸ್ ಕೂಡ ಕೊಟ್ಟಿದ್ದೇವೆ. ಆದರೆ ಸಂಬಂಧಪಟ್ಟ ಶಾಲೆಯವರು ಏನು ಹೇಳುತ್ತಾರೆಂದರೆ - ಮಗು ಹೊತ್ತುಕೊಂಡು ಬರುತ್ತದೆ, ಏನು ಮಾಡುವುದು? ಈ ತರಹದ ಪರಿಸ್ಥಿತಿ ಇದೆ. ಇಂಥ ಶಾಲೆಗಳಿಗೆ ಹೋಗದಿರುವ ಮಕ್ಕಳ ಪೋಷಕರು ಯಾರು ಇದ್ದಾರೆ ಅಂಥವರು ಈ ವಿಚಾರವಾಗಿ ಹೈಕೋರ್ಟ್‌ನಲ್ಲಿ ಪಬ್ಲಿಕ್ ಲಿಟಿಗೇಷನ್ ಹಾಕಿದ್ದು ಅದು ಪೆಂಡಿಂಗ್‌ನಲ್ಲಿದೆ. ಈ ರೀತಿಯಾಗಿ ಇಲ್ಲಿ ನಾವು ಏನೇ ಹೇಳಿಕೊಳ್ಳಬಹುದು. ಆದರೆ ರಿಯಲಿಸ್ಟಿಕ್ ಆಗಿ ಹೇಳುವುದಾದರೆ ಪೋಷಕರು ಇದಕ್ಕೆ ಹೆಚ್ಚು ಗಮನ ಕೊಡಬೇಕು. ಮಾನ್ಯ ಸದಸ್ಯರು ಮಾತನಾಡುತ್ತಾ ಮಕ್ಕಳು ಹೆಚ್ಚು ಪುಸ್ತಕಗಳನ್ನು ಹೊತ್ತುಕೊಂಡು ಹೋಗುವುದರಿಂದ ಕೀಲು ನೋವು ಬೆನ್ನು ನೋವು ಬರುತ್ತದೆಂದು ಹೇಳಿದರು. ಆದರೆ ಇಂಥ ಯಾವುದೇ ರೀತಿಯ ದೂರುಗಳು ಲಿಖಿತ ಮೂಲಕವಾಗಿ ಇಲ್ಲ. ಈಗ ಪಠ್ಯ ಕ್ರಮದಲ್ಲೂ ಬಹಳಷ್ಟು ಬದಲಾವಣೆಗಳನ್ನು ತರುತ್ತಿದ್ದೇವೆ. ಪಠ್ಯಪುಸ್ತಕಗಳನ್ನು ಪ್ರಿಂಟ್ ಮಾಡಿ ಬೈಂಡಿಂಗ್ ಮಾಡುವಾಗ ಕೂಡ ರ್ಯಾಪರ್ ಬಿಟ್ಟರೆ ಬೇರೆ ತರಹದ ತೆಳುವಾದ ಪೇಪರ್‌ಗಳನ್ನು ಇಂಟ್ರಡ್ಯೂಸ್ ಮಾಡಿದ್ದೇವೆ. ಜಾಸ್ತಿ ತೂಕ ಆಗಬಾರದು ಎನ್ನುವ ಉದ್ದೇಶದಿಂದ ಪುಸ್ತಕಗಳಿಗೆ ಬೈಂಡಿಂಗ್ ಹಾಕುವುದನ್ನು ಕೂಡ ನಿಲ್ಲಿಸಿದ್ದೇವೆ. ಹೀಗೆ ಹಲವು ಕ್ರಮಗಳನ್ನು ಸರ್ಕಾರ ತೆಗೆದುಕೊಳ್ಳುತ್ತಿದೆ ಮತ್ತು ಮುಂದೆಯೂ ಕೂಡ ಹೆಚ್ಚು ಆಧುನೀಕರಣಕ್ಕೆ ಹೋಗತಕ್ಕಂಥದ್ದು ಕೂಡ ಆಗುತ್ತಿದೆ. ಮಾನ್ಯ ಸದಸ್ಯರುಗಳು ಏನು ಆತಂಕ ವ್ಯಕ್ತ ಮಾಡಿದ್ದಾರೆ ಅದನ್ನು ಸರ್ಕಾರ ಇನ್ನೂ ಗಂಭೀರವಾಗಿ ತೆಗೆದುಕೊಂಡು ಶಾಲಾ ಮಕ್ಕಳ ಪುಸ್ತಕದ ಹೊರೆಯನ್ನು ಕಡಿಮೆ ಮಾಡಲಿಕ್ಕೆ ಪ್ರಯತ್ನವನ್ನು ಮಾಡುತ್ತೇವೆಂದು ತಮ್ಮ ಮೂಲಕ ಹೇಳಬಯಸುತ್ತೇನೆ.

ಶ್ರೀ ಡಿ.ವಿ. ಸದಾನಂದಗೌಡ: ಮಾನ್ಯ ಅಧ್ಯಕ್ಷರೆ, ಎಲ್ಲಾ ಸರ್ಕಾರಿ ಅಧಿಕಾರಿಗಳ ಮಕ್ಕಳನ್ನು ಕಂಪಲ್ಸರಿಯಾಗಿ ಸರ್ಕಾರಿ ಶಾಲೆಗೆ ಹೋಗಬೇಕೆನ್ನುವಂಥ ಏನಾದರೂ ವ್ಯವಸ್ಥೆ ಮಾಡಿದರೆ ಬಹುಶಃ ಅಧಿಕಾರಿಗಳು ಸ್ವಲ್ಪ ಮುತುವರ್ಜಿವಹಿಸಬಹುದೆನ್ನುವ ಒಂದು ಸಲಹೆಯನ್ನು ಮಾನ್ಯ ಮಂತ್ರಿಗಳು ಸ್ವೀಕಾರ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ವಿಶ್ವನಾಥ್: ಮಾನ್ಯ ಅಧ್ಯಕ್ಷರೆ, ಕೇವಲ ಸರ್ಕಾರಿ ಅಧಿಕಾರಿಗಳ ಮಕ್ಕಳು ಮಾತ್ರವಲ್ಲ, ನಮ್ಮ ಚುನಾಯಿತ ಪ್ರತಿನಿಧಿಗಳ ಮಕ್ಕಳು ಕೂಡ ಕಾನ್ವೆಂಟ್ ಶಾಲೆಗಳಲ್ಲಿ ಓದುತ್ತಿದ್ದಾರೆ. ನಾವು ಇಲ್ಲಿ ಕಾನೂನು ತರುತ್ತೇವೆ. ಆದರೆ ಕಾರ್ಯಾಂಗವೂ ಕೂಡ ಕಾನ್ವೆಂಟ್‌ನಲ್ಲಿದೆ ಹಾಗೆಯೇ ಶಾಸಕಾಂಗವೂ ಕೂಡ ಕಾನ್ವೆಂಟ್‌ನಲ್ಲಿ ಇದೆ.

ಅಧ್ಯಕ್ಷರು: ಶ್ರೀ ನಾರಾಯಣ ಸ್ವಾಮಿಯವರೆ, ನಿಮ್ಮ ಪ್ರಶ್ನೆಗೆ ಉತ್ತರ ಬಂದಿಲ್ಲ. ಶನಿವಾರದೊಳಗೆ ನಿಮಗೆ ಸರ್ಕಾರದಿಂದ ಉತ್ತರವನ್ನು ತರಿಸಿಕೊಡುತ್ತೇನೆ.

ರಾಜ್ಯದಲ್ಲಿ ಇಂಜಿನಿಯರಿಂಗ್ ಕಾಲೇಜುಗಳಿಗೆ ಅನುಮತಿ

90(952) ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ): ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಳೆದ ವರ್ಷ ಹಾಗೂ ಈ ವರ್ಷ ಎಷ್ಟು ಹೊಸ ಇಂಜಿನಿಯರಿಂಗ್ ಕಾಲೇಜನ್ನು ಪ್ರಾರಂಭಿಸಲು ಸರ್ಕಾರ ಅನುಮತಿ ನೀಡಿರುವುದು; ವಿವರ ನೀಡುವುದು;

ಆ) ಈ ಕಾಲೇಜುಗಳಲ್ಲಿ ಯಾವ ಯಾವ ಕೋರ್ಸ್ ಪ್ರಾರಂಭಿಸಲು ಅನುಮತಿ ನೀಡಲಾಗಿದೆ; ಹಾಗೂ ಎಷ್ಟೆಷ್ಟು ಇಂಟೆಕ್ ಇರುವುದು ಮತ್ತು ಯಾವ ಯಾವ ಷರತ್ತುಗಳಿಗೆ ಒಳಪಟ್ಟು ಈ ಕಾಲೇಜು ಪ್ರಾರಂಭಿಸಲು ಅನುಮತಿ ನೀಡಲಾಗಿದೆ;

ಇ) ಮೂಲಭೂತ ಸೌಕರ್ಯ ಇಲ್ಲದೆ ಇದ್ದರೂ ಸಹ ಕೆಲವೊಂದು ಕಾಲೇಜುಗಳಿಗೆ ಅನುಮತಿ ನೀಡಿರುವ ಸಂಗತಿ ನಿಜವೇ;

ಈ) ಹಾಗಿದ್ದಲ್ಲಿ, ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಇರುವಾಗ, ಹೊಸ ಕಾಲೇಜುಗಳನ್ನು ಪ್ರಾರಂಭಿಸುವುದು ಅವಶ್ಯವಿಲ್ಲವೆಂಬ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಕಳೆದ ವರ್ಷ ಯಾವ ಯಾವ ಕಾಲೇಜುಗಳಲ್ಲಿ ಯಾವ ಯಾವ ಕೋರ್ಸ್‌ಗಳಲ್ಲಿ ಎಷ್ಟೆಷ್ಟು ಸ್ಥಳಗಳು ಖಾಲಿ ಇದ್ದವು; ವಿವರ ನೀಡುವುದು?

ಡಾ। ಜಿ. ಪರಮೇಶ್ವರ (ಉನ್ನತ ಶಿಕ್ಷಣ ಸಚಿವರು):

ಅ) 1999-2000 - 07

2000-2001 - 06

ವಿವರಗಳು 1ನೇ ಮತ್ತು 2ನೇ ಅನುಬಂಧದಲ್ಲಿವೆ.

ಆ) ವಿವರಗಳು 1ನೇ ಮತ್ತು 2ನೇ ಅನುಬಂಧದಲ್ಲಿವೆ. ಎಐಸಿಟಿಇ ವಿಧಿಸಿರುವ ಸಾಮಾನ್ಯ ಷರತ್ತುಗಳಿಗೆ ಒಳಪಟ್ಟಿರುತ್ತದೆ.

ಇ) ಎಐಸಿಟಿಇ ನಿಗಧಿಪಡಿಸಿರುವ ಮಾರ್ಗಸೂತ್ರಗಳನ್ನು ಅವುಗಳು ಪೂರೈಸುತ್ತವೆ.

ಈ) ಮಾಹಿತಿ ತಂತ್ರಜ್ಞಾನದ ಕ್ಷಿಪ್ರ ಬೆಳವಣಿಗೆಯ ಪರಿಣಾಮದಿಂದ ರಾಜ್ಯದ ವಿವಿಧ ಭಾಗಗಳಲ್ಲಿ ನೂತನ ಇಂಜಿನಿಯರಿಂಗ್ ಕಾಲೇಜುಗಳ ಸ್ಥಾಪನೆ ಅಗತ್ಯವಿದೆ ಎಂದು ನಿರ್ಧರಿಸಲಾಗಿದೆ.

ಉ) ವಿವರಗಳು 3ನೇ ಅನುಬಂಧದಲ್ಲಿವೆ.